ಗಣಕ ಕೇಂದ್ರ

ಕರ್ನಾಟಕ ವಿಧಾನ ಪರಿಷತ್ತು
143ನೇ ಮುಂದುವರೆದ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	1609(1717)
ಸದಸ್ಯರ ಹೆಸರು	ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ಸಚಿವರು	ಮಾನ್ಯ ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ:	22.03.2021

	ಪ್ರಶ್ನೆ	ಉತ್ತರ
(ಅ)	ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸರ್ಕಾರ ಎಷ್ಟು ಎಕರೆ ಜಮೀನನ್ನು ಯಾವಾಗ ಮಂಜೂರು ಮಾಡಿದೆ:	1965ನೇ ಸಾಲಿನಿಂದ 1995ನೇ ಸಾಲಿನವರೆಗಿನ ಅವಧಿಯಲ್ಲಿ ಸರ್ಕಾರದ ಆದೇಶಗಳನ್ವಯ ಒಟ್ಟು 1112.04 ಎಕರೆ ಜಮೀನನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಲಾಗಿರುತ್ತದೆ.
(ಆ)	ಮಂಜೂರು ಮಾಡಲಾಗಿರುವ ಜಾಗದಲ್ಲಿ ಎಷ್ಟು ಒತ್ತುವರಿಯಾಗಿದೆ; ಒತ್ತುವರಿ ಮಾಡಿಕೊಂಡಿರುವವರ ವಿವರಗಳನ್ನು ಒದಗಿಸುವುದು;	ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಜೂರಾದ ಜಮೀನಿನ ಪೈಕಿ 9 ಎಕರೆ 8.1/4 ಗುಂಟೆ ಒತ್ತುವರಿಯಾಗಿದ್ದು, ಒತ್ತುವರಿದಾರರ ವಿವರಗಳು ಹಾಗೂ ಒತ್ತುವರಿಗೆ ಸಂಬಂಧಿಸಿದಂತೆ ವಿರುದ್ಧ ದಾಖಲಿಸಲಾಗಿರುವ ನ್ಯಾಯಿಕ ಪ್ರಕರಣಗಳ ಹಾಗೂ ಸದರಿ ಪ್ರಕರಣಗಳ ಪ್ರಸ್ತುತ ಹಂತದ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.
(ಇ)	ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ದೂರುಗಳನ್ನು ದಾಖಲಿಸಿ ಕ್ರಮಕೈಗೊಳ್ಳಲಾಗಿದೆಯೇ; ಪ್ರಸ್ತುತ ಯಾವ ಹಂತದಲ್ಲಿದೆ?	ಒತ್ತುವರಿ ವಿರುದ್ಧ ದಾಖಲಿಸಲಾಗಿರುವ ನ್ಯಾಯಿಕ ಪ್ರಕರಣಗಳ ಪೈಕಿ ಎರಡು ಪ್ರಕರಣಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರ ತೀರ್ಮಾನವಾಗಿರುತ್ತದೆ. ಉಳಿದ ಪ್ರಕರಣಗಳಲ್ಲಿ ವ್ಯಾಜ್ಯ ವ್ಯವಹರಣೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ಒತ್ತುವರಿ ತೆರವುಗೊಳಿಸಲು ಬೆಂಗಳೂರು ವಿಶ್ವವಿದ್ಯಾಲಯದಿಂದ ಕ್ರಮವಹಿಸಲಾಗುತ್ತಿದೆ.

ಇಡಿ 48 ಯುಬಿಬಿ 2021

(ಡಾ|| ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

ಅನುಬಂಧ-1

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 1609(1717)

ಕ್ರ.ಸಂ	ಒತ್ತುವರಿ ಜಮೀನು ಸ್ಥಿತವಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ಪ್ರದೇಶ	ಸರ್ವೆ ನಂ	ಒತ್ತುವರಿ ಪ್ರಮಾಣ	ಒತ್ತುವರಿ ಮಾಡಿಕೊಂಡಿರುವ ವ್ಯಕ್ತಿ/ಸಂಸ್ಥೆಯ ವಿವರ	ನ್ಯಾಯಿಕ ಪ್ರಕರಣ ಸಂಖ್ಯೆ	ಪ್ರಕರಣದ ಪ್ರಸ್ತುತ ಹಂತ
1	ಮಲ್ಲತಹಳ್ಳಿ	32	1.00 ಎಕರೆ	ಕನ್ಯಾಕುಮಾರಿ ವಿದ್ಯಾಸಂಸ್ಥೆ	ಅಸಲು ದಾವೆ ಸಂ:886/2013	ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ
2	ಮಲ್ಲತಹಳ್ಳಿ	30	2.20 ಎಕರೆ	ಪಾಂಚಜನ್ಯ ವಿದ್ಯಾಪೀಠ ಕ್ಷೇಮಾಭಿವೃದ್ಧಿ ಟ್ರಸ್ಟ್	RFA : 1355/2010	ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ
3	ಮಲ್ಲತಹಳ್ಳಿ	32	0.1 1/4 ಗುಂಟೆ	ಭ್ರಮರಾಂಭಾ ಫ್ಯೂಲ್ ಸ್ಟೇಷನ್	ಅಸಲು ದಾವೆ ಸಂ:7514/2013	ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ
			0.1 ಗುಂಟೆ	ಶ್ರೀಮತಿ ನಾಗಮ್ಮ		
4	ಕೆಂಚನಹಳ್ಳಿ		5.26 ಎಕರೆ	ಜೈ ಭೀಮ ಮೆಮೋರಿಯಲ್ ಟ್ರಸ್ಟ್	ರಿಟ್ ಅರ್ಜಿ ಸಂಖ್ಯೆ:49171/2017	ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕಾಗಿ ಬಾಕಿ ಇರುತ್ತದೆ